KACB010003092022

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ

ಸ್ಪೆಷಲ್ ಕೇಸ್ ನಂ. 19/2022

ಫಿರ್ಯಾದಿಃ ಸರ್ಕಾರ – ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆ

ವಿರುದ್ಧ

ಆರೋಪಿಃ ವೆಂಕಟರಮಣರೆಡ್ಡಿ ತಂದೆಃ ಪೆದ್ದಣ್ಣ

## ದೋಷಾರೋಪಣೆ

ಶ್ರೀಮತಿ ಎನ್.ವಿ.ಭವಾನಿ, ಬಿ.ಎ. ಎಲ್.ಎಲ್.ಬಿ. ಹಾನರ್ಸ್, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಚಿಕ್ಕಬಳ್ಳಾಪುರ, ಆದ ನಾನು

ವೆಂಕಟರಮಣರೆಡ್ಡಿ, ತಂದೆಃ ಪೆದ್ದಣ್ಣ, ವಯಸ್ಸುಃ 39 ವರ್ಷ, ಉದ್ಯೋಗಃ ವ್ಯವಸಾಯ, ವಾಸಃ ಎ.ಹೊಸಹಳ್ಳಿ ಗ್ರಾಮ, ಚಿಂತಾಮಣಿ ತಾಲ್ಲೂಕು.

ನಿಮ್ಮ ವಿರುದ್ಧ ಆಪಾದಿಸುವುದೇನೆಂದರೆಃ

ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿನ ಎ.ಹೊಸಹಳ್ಳಿ ಗ್ರಾಮದ ಚಾಸಾ 11 ಆವುಲರೆಡ್ಡಿ ರವರ ಜಮೀನಿನಲ್ಲಿ ಆರೋಪಿಯಾದ ನೀವು ಯಾವುದೇ ಪರವಾನಿಗೆಯನ್ನು ಪಡೆಯದೇ ಅಕ್ರಮವಾಗಿ ಮಾರಾಟ ಮಾಡುವ ಉದ್ದೇಶದಿಂದ ಬೆಳೆಸಿದ್ದ 4 ಗಾಂಜಾ ಗಿಡಗಳನ್ನು ಕಿತ್ತು ಜಮೀನಿನಲ್ಲಿದ್ದ ಶೆಡ್ಡಿನಲ್ಲಿ ಸುಮಾರು 30,000/- ರೂಪಾಯಿ ಬೆಲೆ ಬಾಳುವ 1 ಕೆ.ಜಿ.

520 ಗ್ರಾಂನಷ್ಟು ಗಾಂಜಾವನ್ನು ದಾಸ್ತಾನು ಮಾಡಿದ್ದು, ದಿನಾಂಕ 28.06.2021 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಚಾಸಾ 1 ರಿಂದ 10 ರವರು ದಾಳಿ ಮಾಡಿದಾಗ ಸದರಿ ಗಾಂಜಾದೊಂದಿಗೆ ಸಿಕ್ಕಿಬಿದ್ದಿದ್ದು, ಈ ಮೂಲಕ ನೀವು ಎನ್.ಡಿ.ಪಿ.ಎಸ್. ಕಾಯ್ದೆ 1985 ರ 20(a) ಮತ್ತು (b) ರನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಸದರಿ ಆರೋಪದ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ : 29 ನೇ ಜನವರಿ 2024.

( ಎನ್.ವಿ. ಭವಾನಿ )
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸ್ಪೆಷಲ್ ಕೇಸ್ ನಂ. 19/2022

ಫಿರ್ಯಾದಿಃ ಸರ್ಕಾರ – ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆ

ವಿರುದ್ಧ

ಆರೋಪಿಃ ವೆಂಕಟರಮಣರೆಡ್ಡಿ ತಂದೆಃ ಪೆದ್ದಣ್ಣ

## ದೋಷಾರೋಪಣೆ

| | | |
|---|---|---|
| ಆರೋಪಿಯ ಹೆಸರು | – | ವೆಂಕಟರಮಣರೆಡ್ಡಿ |
| ತಂದೆ ಹೆಸರು | – | ಪೆದ್ದಣ್ಣ |
| ವಯಸ್ಸು | – | 39 ವರ್ಷ |
| ಉದ್ಯೋಗ | – | ವ್ಯವಸಾಯ |
| ವಾಸ | – | ಎ.ಹೊಸಹಳ್ಳಿ ಗ್ರಾಮ, ಚಿಂತಾಮಣಿ ತಾಲ್ಲೂಕು. |

## ಆರೋಪಿಯ ಹೇಳಿಕೆ

ಪ್ರಶ್ನೆಃ ನಿಮ್ಮ ಮೇಲೆ ಮಾಡಿದ ದೋಷಾರೋಪಣೆಯ ವಿವರಗಳು ನಿಮಗೆ ತಿಳಿಯಿತೆ?
ಉತ್ತರಃ [illegible]

ಪ್ರಶ್ನೆಃ ನೀವು ತಪ್ಪು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಆಗಬೇಕೆಂದು ಬಯಸುತ್ತೀರಾ?
ಉತ್ತರಃ ತಪ್ಪು ಮಾಡಿಲ್ಲ, ವಿಚಾರಣೆ ಆಗಬೇಕು

ಮೇಲೆ ಹೇಳಿದ ದೋಷಾರೋಪಣೆಗಳನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.

ದಿನಾಂಕಃ 29 ನೇ ಜನವರಿ 2024.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.

ಕೆ. ವೆಂಕಟರಮಣರೆಡ್ಡಿ